<u>ದಿನಾಂಕ 08.04.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ವಿ ಎಸ್ ಆರ್ ವಕೀಲರಿಂದಃ</u>

ದಾವಾ ಆಸ್ತಿ ಐಟಂ ನಂಬರ್ 1 ಕ್ಕೆ ಬೋರ್ ವೆಲ್ ನ ಸೌಕರ್ಯವಿದೆ. ಈ ಬೋರ್ ವೆಲ್ ನ ನೀರನ್ನು ಸರದಿ ಪ್ರಕಾರ ಉಪಯೋಗಿಸುತ್ತೇವೆಂದರೆ ಸಾಕ್ಷಿಯು ಒಂದೊಂದು ದಿನ ಕೊಡುತ್ತಾರೆಂದು ನುಡಿಯುತ್ತಾರೆ. ಈ ಸರದಿ ಪ್ರಕಾರ 2 ದಿನ ನೀರು ಬರುತ್ತದೆ ಎಂದರೆ ನಿಜ. ಒಂದು ಬೋರ್ ವೆಲ್ ನಿಂದ ವಾದಿ, 2 ನೇಪ್ರತಿವಾದಿ, 5 ನೇ ಪ್ರತಿವಾದಿ ಮತ್ತು 8 ನೇ ಪ್ರತಿವಾದಿ ತಲಾ 2 ದಿನ ಉಪಯೋಗಿಸುತ್ತಾರೆಂದರೆ ನಿಜ. ಈ ಬೋರ್ ವೆಲ್ ಗಳ ನಿರ್ವಹಣೆ ಜಂಟಿಯಾಗಿ ಮಾಡುತ್ತಾರೆಂದರೆ ನಿಜ. ಈ ಬೋರ್ ವೆಲ್ ಗಳಿಂದ ಬೇರೆ ಜಮೀನಿಗೆ ಪೈಪ್ ಲೈನ್ ಹಾಕಿಸಿಕೊಂಡಿರುತ್ತೇವೆಂದರೆ ಸುಳ್ಳು. ಬೇರೆ ಜಮೀನುಗಳಿಗೆ ನಾನು ಈ ಬೋರ್ ವೆಲ್ ಗಳಿಂದ ನೀರು ಹಾಯಿಸಿಕೊಳ್ಳುತ್ತಿದ್ದೆ ಎಂದರೆ ಸುಳ್ಳು ಸಾಕ್ಷಿ ಮುಂದುವರೆದು 1 ವರೆ ವರ್ಷಗಳಿಂದ ನಾನು ಬಿಟ್ಟು ಬಿಟ್ಟಿದ್ದೇನೆಂದು ನುಡಿಯುತ್ತಾರೆ. ಈ ನೀರಿನ ವಿಚಾರವಾಗಿ ನಾನು ಸಹೋದರರ ವಿರುದ್ಧ ಪೋಲಿಸ್ ದೂರು ನೀಡಿದ್ದೆ ಎಂದರೆ ನಿಜ. ಈ ನೀರಿನ ವಿಚಾರವಾಗಿ ನಾನು ದಾವಾ ಹಾಕಿರುತ್ತೇನೆಂದರೆ ಸಾಕ್ಷಿಯು ಜಮೀನಿನ ವಿಚಾರವಾಗಿ ಹಾಕಿರುತ್ತೇನೆಂದು ನುಡಿಯುತ್ತಾರೆ. ತಹಶೀಲ್ದಾರ್ ರವರಿಗೆ ಖಾತಾ ವಿಚಾರವಾಗಿ ನಾನು ಅರ್ಜಿ ಕೊಟ್ಟಿದ್ದೆ ಎಂದರೆ ನಿಜ. ನಾನು ಮತ್ತು ಪ್ರತಿವಾದಿಯವರು ರಾಜಿ ಮಾಡಿಕೊಂಡಿರುತ್ತೇವೆಂದು ತಹಶೀಲ್ದಾರ್ ರವರಿಗೆ ಹೇಳಿಕೆ ಕೊಟ್ಟಿರುತ್ತೇವೆಂದರೆ ಸುಳ್ಳು. ವಕೀಲರು ತಹಶೀಲ್ದಾರ್ ರವರ ಮುಂದೆ ನೀಡಿದ ಹೇಳಿಕೆಯನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಅಲ್ಲಗಳೆಯುತ್ತಾರೆ. ವಕೀಲರು ತಹಶೀಲ್ದಾರ್ ರವರ ಆದೇಶವನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಅಲ್ಲಗಳೆಯುತ್ತಾರೆ. ತಹಶೀಲ್ದಾರ್ ರವರ ಆದೇಶದ ನಂತರ ರೆವೆನ್ಯೂ ನಕ್ಷೆ ಮಾಡಿಕೊಟ್ಟಿರುತ್ತಾರೆಂದರೆ ಸುಳ್ಳು. ತಹಶೀಲ್ದಾರ್ ರವರ ಆದೇಶದಂತೆ

ಪಹಣಿಯಾಗಿದೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. ನಾನು ಒಂದು ಆಸ್ತಿಯ ಮೇಲೆ ಬ್ಯಾಂಕ್ ಸಾಲ ಪಡೆದಿರುತ್ತೇನೆಂದರೆ ನಿಜ. ನನಗೂ ಮತ್ತು ಪ್ರತಿವಾದಿಯವರಿಗೂ ಭಾಗ ಆಗಿದೆ ಎಂದರೆ ಸುಳ್ಳು.

ದಾವಾ ಆಸ್ತಿ ಐಟಂ ನಂಬರ್ 2 ನನ್ನ ತಂದೆ ಹೆಸರಿನಲ್ಲಿ ಇಲ್ಲ ಎಂದರೆ ನಿಜ. ನನ್ನ ದೊಡ್ಡಪ್ಪ ಈ ಆಸ್ತಿಯನ್ನು ಮಾಡಿಕೊಡಬೇಕಾಗಿರುತ್ತದೆ. ಈ ಆಸ್ತಿಗಳ ಮೇಲೆ ಪ್ರತಿವಾದಿಯವರು ದಾವಾ ಹಾಕಿರುತ್ತಾರೆಂದರೆ ನಿಜ. ನಾನು ಈ ದಾವಾದಲ್ಲಿ ಪಕ್ಷಗಾರರನ್ನಾಗಿರುತ್ತೇನೆ. ಈ ದಾವಾ ಸಂಖ್ಯೆ 32/2022 ಅಂದರೆ ನಿಜ. ದಾವಾ ಆಸ್ತಿಗಳಲ್ಲಿ 2 ಮನೆಗಳು, ಒಂದು ಖಾಲಿ ನಿವೇಶನ ಇದೆ ಎಂದರೆ ನಿಜ. ಇದನ್ನು ಮಾತುಕತೆಯ ಮುಖಾಂತರ ಭಾಗ ಮಾಡಿಕೊಂಡಿರುತ್ತೇವೆಂದರೆ ಸುಳ್ಳು. ನಾಡ ಹೆಂಚಿನ ಮನೆಯಲ್ಲಿ ನಾನು ಮತ್ತು 8 ನೇ ಪ್ರತಿವಾದಿ ಇದ್ದೇವೆಂದರೆ ನಿಜ. ಸೀಮೆ ಹೆಂಚಿನ ಮನೆಯನ್ನು 5 ನೇ ಪ್ರತಿವಾದಿ ಉಳಿಸಿಕೊಂಡಿರುತ್ತಾರೆಂದರೆ ನಿಜ . ಈ ಬಗ್ಗೆ ನನಗೆ 50 ಸಾವಿರ ಕೊಟ್ಟಿರುತ್ತಾರೆಂರದೆ ಸುಳ್ಳು. ಹಿಂದಗಡೆ ಇರುವ ಹೊಸ ಹೆಂಚಿನ ಮನೆಯಲ್ಲಿ ನನ್ನ ಅಣ್ಣ ಪುಟ್ಟಸ್ವಾಮಿ ಮತ್ತು ನನ್ನ ತಮ್ಮ ತಮ್ಮಯ್ಯ ಇದ್ದಾರೆ.

ದಾವಾ ಆಸ್ತಿ ಐಟಂ ನಂಬರ್ 4 ರಲ್ಲಿ ಅರ್ಧ ಭಾಗದ ಖಾಲಿ ನಿವೇಶವನ್ನು ನನ್ನ ಅಣ್ಣ ಪುಟ್ಟಸ್ವಾಮಿಗೆ ಕೊಟ್ಟಿರುತ್ತಾರೆಂದರೆ ಗೊತ್ತಿಲ್ಲ. ಇದರಲ್ಲಿ ಅರ್ಧ ಭಾಗವನ್ನು 3 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಹಾಗೇ ಕಟ್ಟಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸರ್ಕಾರದ ಸೌಲಭ್ಯ ಪಡೆದು 3ನೇ ಪ್ರತಿವಾದಿ ಮನೆ ಕಟ್ಟಿಕೊಂಡಿರುತ್ತಾರೆಂದರೆ ಗೊತ್ತಿಲ್ಲ. 3 ನೇ ಪ್ರತಿವಾದಿ ಮತ್ತು ಅವರ ಕುಟುಂಬಸ್ಥರು ಸದರಿ ಮನೆಯಲ್ಲಿ ವಾಸಮಾಡಿಕೊಂಡಿರುತ್ತಾರೆಂದರೆ ನಿಜ. ದಿಃ14.06.2014 ರಂದು ನಾನು ಮತ್ತು ನನ್ನ ಸಹೋದರರು ಮತ್ತು ಸಹೋದರಿಯರು ಭಾಗ ಮಾಡಿಕೊಂಡಿರುತ್ತೇವೆಂದರೆ ಸುಳ್ಳು. ಈ ವಿಭಾಗದಂತೆ ಅನುಭವಿಸುಕೊಂಡು ಹೋಗುತ್ತಿದ್ದೇವೆಂದರೆ ಸುಳ್ಳು. ನೀರಿನ ವಿಚಾರವಾಗಿ ನನಗೂ ಮತ್ತು ನನ್ನ ಸಹೋದರರಿಗೂ ಇರುವ ವೈಷಮ್ಯದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸುಳ್ಳು. ಪ್ರತಿವಾದಿಯವರಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.